


'ಜೋಗಿ' ಚಿತ್ರದ ಮೂಲಕ ರೌಡಿಸಂ ಚಿತ್ರಗಳಿಗೆ ಹೊಸ ವರ್ಚಸ್ಸು ತಂದುಕೊಟ್ಟ ಪ್ರೇಮ್

ಕರ್ನಾಟಕ ರೂಪಿಸಿದ ಅತ್ಯಂತ ದುಬಾರಿ ಬಜೆಟ್‌ನ, ಸಾಹಸಪ್ರಧಾನ ಹಾಗೂ ಹಿಂಸಾವಿನೋದದ ಸಿನಿಮಾ ಯಾವುದು?

ಕಾವೇರಿ ನೀರನ್ನು ತಮಿಳುನಾಡಿಗೆ ಬಿಡುಗಡೆ ಮಾಡುವ ಕುರಿತಂತೆ ಸುಪ್ರೀಂಕೋರ್ಟ್ ತೀರ್ಪಿನ ಹಿನ್ನೆಲೆಯಲ್ಲಿ ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಹಿಂಸಾಚಾರವನ್ನು ನೆನಪಿಸಿಕೊಳ್ಳಿ. ಲಾಠಿಚಾರ್ಜ್, ಗೋಲಿಬಾರ್, ಉದ್ರಿಕ್ತ ಹಾಗೂ ಭಯಭೀತ ಜನರ ಕೂಗಾಟ, ಅಮಾಯಕರ ಸಾವು ನೋವು, ಇವೆಲ್ಲವನ್ನೂ ಮೀರಿದಂತೆ ನಗರದ ರಸ್ತೆರಸ್ತೆಗಳಲ್ಲಿ ಹೊತ್ತಿಉರಿದ ಕೃತಕ ಚಿತೆಗಳು– ವಾಹನಗಳು, ಲಂಕಾದಹನದಂತೆ ಕಾಣಿಸುತ್ತಿದ್ದ ಉರಿಯುತ್ತಿದ್ದ ಬಸ್‌ಗಳ ಸಾಲು – ಇವೆಲ್ಲವನ್ನೂ ತಾಂತ್ರಿಕ ಪ್ರಭಾವಳಿಯ ಹಾಲಿವುಡ್ ಸಿನಿಮಾಗಳಲ್ಲಿ ಕಾಣಲು ಕೂಡ ಕಷ್ಟ. ಕಿರುತೆರೆಗಳಲ್ಲಿ ಪುನರಾವರ್ತನೆಗೊಳ್ಳುತ್ತಿದ್ದ ಈ ದೃಶ್ಯಗಳು ಸಿನಿಮಾದ ದೃಶ್ಯಗಳಂತೆಯೇ ಕೆಲವರನ್ನು ಪ್ರಭಾವಿಸಿ ಹಿಂಸೆಗೆ ಉದ್ದೀಪಿಸಿದ್ದಲ್ಲಿ ಆಶ್ಚರ್ಯವಿಲ್ಲ. ಹೀಗೆ ಬೆಂಗಳೂರು 'ಬೆಂದಕಾಳೂರಿನ' ಸ್ವರೂಪ ತಾಳಿದ ಸಂದರ್ಭದಲ್ಲೇ, 'ಕನ್ನಡಿಗರು ಶಾಂತಿಪ್ರಿಯರು' ಎನ್ನುವ ಮಂತ್ರಪಠಣ ಕೂಡ ಕಿರುತೆರೆಯಲ್ಲಿ ಪದೇಪದೇ ಬಿತ್ತರಗೊಳ್ಳುತ್ತಿತ್ತು. ಇದಕ್ಕೆ ಹಿಮ್ಮೇಳದಂತೆ ಸಿನಿಮಾದ ಹೀರೊಗಳ ಶಾಂತಿಬೋಧೆ!

'ಬೆಂಗಳೂರು ರೌಡಿಗಳ ಕೊಂಪೆ' ಎನ್ನುವ ಕನ್ನಡ ಸಿನಿಮಾಗಳ ಚಿತ್ರಣ ವರ್ತಮಾನದಲ್ಲಿ ನಿಜವಾದ ಕ್ಷಣವದು. ತೆರೆಯ ಮೇಲಿನ ವಿಲನ್‌ಗಳೆಲ್ಲ ಜೀವ ತಳೆದು ಬೆಂಗಳೂರಿನ ಬಯಲಿಗೆ ಬಂದಂತೆ ಕಾಣಿಸುತ್ತಿತ್ತು. ಈಗಲೂ ನಮ್ಮ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿರುವ ಆ ದೃಶ್ಯಗಳನ್ನು ಮತ್ತಷ್ಟು ಸೂಕ್ಷ್ಮವಾಗಿ ನೋಡುತ್ತ, ಇಂದಿನ ಕನ್ನಡ ಚಿತ್ರರಂಗದ ಸ್ಥಿತಿಯನ್ನು ಗಮನಿಸಿದರೆ, ಖಳನಟರ ಕುರಿತಂತೆ ನಿಲುವೊಂದಕ್ಕೆ ಬರಲು ಸಾಧ್ಯವಿದೆ. ಅದು – 'ಶಾಂತಿಪ್ರಿಯರು' ಎನ್ನುವ ವಿಶೇಷಣವನ್ನು ಬಳಸುತ್ತಲೇ, ವ್ಯವಸ್ಥಿತವಾಗಿ ಅಶಾಂತಿಯನ್ನು ಸೃಷ್ಟಿಸುತ್ತಿರುವ ವಿರೋಧಾಭಾಸ. ಹಿಂದೆಂದೂ ಕಾಣದಷ್ಟು ಹಿಂಸಾತ್ಮಕ ಸನ್ನಿವೇಶಗಳನ್ನು ನಾವು ಪ್ರಸ್ತುತ ರೂಪಿಸುತ್ತಿದ್ದೇವೆ. ಆದರೆ, ಆ ಸನ್ನಿವೇಶಗಳಿಗೆ ಪೂರಕವಾದ ಸಶಕ್ತ ಪಾತ್ರಗಳನ್ನು ಸೃಷ್ಟಿಸಲು ಸೋಲುತ್ತಿದ್ದೇವೆ.

ಕಾವೇರಿ ಗಲಭೆಯ ವಿಷಯ ಮರೆತು, ಕನ್ನಡ ಚಿತ್ರರಂಗದ ಈ ಹೊತ್ತಿನ ಕಥನಗಳನ್ನೇ ನೆನಪಿಸಿಕೊಂಡರೂ – ಕಳೆದ ಒಂದೂವರೆ ದಶಕದಲ್ಲಿ ರೌಡಿಸಂ ಹಾಗೂ ಅದಕ್ಕೆ ತಳಕು ಹಾಕಿಕೊಂಡ ಹಿಂಸೆಯನ್ನು ಅತಿರೇಕ ಎನ್ನಿಸುವಷ್ಟರ ಮಟ್ಟಿಗೆ ಚಿತ್ರಿಸಿರುವ ಸಿನಿಮಾಗಳು ನೂರಾರು ಸಂಖ್ಯೆಯಲ್ಲಿ ಕನ್ನಡದಲ್ಲಿ ರೂಪುಗೊಂಡಿವೆ. ಆದರೆ, ಅದ್ಭುತ ಎನ್ನಬಹುದಾದ ಒಬ್ಬನೇ ಒಬ್ಬ ಖಳನಾಯಕನನ್ನು ಸೃಷ್ಟಿಸುವುದು ಈ ಒಂದೂವರೆ ದಶಕದಲ್ಲಿ ನಮಗೆ ಸಾಧ್ಯವಾಗಿದೆಯೇ ಎಂದರೆ ಉತ್ತರಿಸುವುದು ಕಷ್ಟ. ಪಾತ್ರವೈವಿಧ್ಯ ಹಾಗೂ ಜನಪ್ರಿಯತೆಯ ದೃಷ್ಟಿಯಿಂದ



'ಅಂತ'ದ ಕನ್ವರ್‌ಲಾಲ್ ಖ್ಯಾತಿಯ ಅಂಬರೀಶ್

